ಓಃಎಸ್ಃನಂ.114-2015

ಪಿ.ಡಬ್ಲ್ಯೂ- 2

ದಿಃ 05-08-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ.ಸಿ ಎಸ್ ಎಸ್ ವಕೀಲರಿಂದ

ನನ್ನ ವಾಸ ಸ್ಥಳ ಎರೇಹಳ್ಳಿ. ನನ್ನ ವಾಸ ಸ್ಥಳ ಗಾರೇಹಳ್ಳಿ ಅಲ್ಲ. ನಾನು 7ನೇ ತರಗತಿಯ ವರೆಗೆ ವ್ಯಾಸಾಂಗ ಮಾಡಿರುತ್ತೇನೆ. ನನ್ನ ಸಾಕ್ಷ್ಯಾ ಪ್ರಮಾಣ ಪತ್ರವನ್ನು ನಾನು ನೋಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರುವುದಿಲ್ಲ. ನನ್ನ ಸಾಕ್ಷ್ಯಾ ಪ್ರಮಾಣ ಪತ್ರದಲ್ಲಿ ಬರೆದಿರುವ ನನ್ನ ವಾಸ ಸ್ಥಳ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸರ್ವೇ ನಂ. 36 ರಲ್ಲಿ ಒಟ್ಟು 8 ಎಕರೆ ವಿಸ್ತೀರ್ಣ ಜಮೀನು ಇದೆ . ಸದರಿ ಆಸ್ತಿಯ ಚಕ್ಕುಬಂಧಿ ನನಗೆ ಗೊತ್ತಿಲ್ಲ. ವಾದಿಯು ನನ್ನ ಟ್ಯಾಕ್ಟರ್ ನ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಈ ದಾವೆಯ ಪ್ರತಿವಾದಿ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಸರ್ವೇ ನಂ.36 ರಲ್ಲಿ ಪ್ರತಿವಾದಿಗೆ 2 ಎಕರೆ 36 ಗುಂಟೆ ವಿಸ್ತೀರ್ಣ ಜಮೀನು ಇದೆ. ವಾದಿಯು ದಾವಾ ಸ್ವತ್ತಿನ 8 ಎಕರೆ ವಿಸ್ತೀರ್ಣದಲ್ಲಿ ಸ್ವಾಧೀನ ಅನುಭವದಲ್ಲಿದ್ದಾರೆ ಎಂದು ತೋರಿಸಲು ನಾನು ಸದರಿ ಆಸ್ತಿಯನ್ನು ಅಳತೆ ಮಾಡಿಲ್ಲ ಎಂದರೆ ಸರಿ . ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತಿನ ಚಕ್ಕುಬಂಧಿಗೆ ಸಂಬಂಧಪಟ್ಟಂತೆ ನಮೂದು ಮಾಡಿಲ್ಲ ಎಂದರೆ ಸರಿ . ನಾನು ದಾವಾ ಸ್ವತ್ತಿನಲ್ಲಿ ಟ್ಯಾಕ್ಟರ್ ಅಲ್ಲ ಉಳುಮೆ ಮಾಡಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವಾ ಸ್ವತ್ತಿನ ಸಂಗತಿಗಳು ನನಗೆ ಗೊತ್ತಿಲ್ಲದಿದ್ದರು ಸಹ ನಾನು ವಾದಿಯ ಮಾತು ಕೇಳಿ ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಉಳುಮೆ ಮಾಡಲು ಹೋದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ .

ಮರು ವಿಚಾರಣೆಃ ಇಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಕೇ. ಸ. ಇ. ಎ. ಒ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**